# ಹರಿಯ ಚರಣವೆಂಬ ಸುರಧೇನವನು

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 66.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 585.
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 166.
4. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 238.
5. **Note:** Lyrics given here are as per Ref. 1. The wordings in other reference books are same and are fully matching with Ref. 1.
6. **Note:** Singer has followed these lyrics.

ರಾಗ: ಭೈರವಿ ತಾಳ: ಅಟ

ಹರಿಯ ಚರಣವೆಂಬ ಸುರಧೇನವನು
ಗುರುಬೋಧೆಯೆಂಬ ಕಣ್ಣಿಯಲಿ ಕಟ್ಟಿರಯ್ಯ ॥ ಪ ॥

ಭಕುತಿಯೆಂಬ ಕರುವನೆ ಬಿಟ್ಟು, ನಿರುತ ವಿ-
ರಕುತಿಯೆಂಬ ಚೆನ್ನದಳಿಯ ಹಾಕಿ
ಯುಕುತವಾದ ನಿತ್ಯಕಾಯ ಚರಿಗೆಯೊಳು
ಮುಕುತಿ ನಾಮಾಮೃತ ಕರೆದುಕೊಳ್ಳಿರಯ್ಯ ॥ 1 ॥

ಕಾಮ ಕ್ರೋಧ ಲೋಭ, ಮೋಹ ಮದ ಮತ್ಸರಗಳೆಂಬ
ಹಮ್ಮೆಂಬ ಕುರುಳನೆ ತಾಳಿಹಾಕಿ
ತಾಮಸ ಜ್ಞಾನಾಗ್ನಿ ಪುಟಗೈದು ಇಂದ್ರಿಯ
ನೇಮದ ನೀರ ಬೆರಸಿ ಕಾಯಲಿಡಿರೊ ॥ 2 ॥

ಶಾಂತಗುಣವೆಂಬ ಹದನರಿತು ಆರಿಸಿ ಮತ್ತೆ
ಭ್ರಾಂತಮನ ಮಜ್ಜಿಗೆಯ ಹೆಪ್ಪನಿಕ್ಕಿ

ಕಾಂತವಿಷ್ಣು ಮಾಯಾ ಮಂಥದಿ ಶೋಧಿಸಿ ಸಿ –
ದ್ಧಾಂತವೆಂಬ ಕಡಗೋಲ ನೇಣನೆ ಪಿಡಿದು ll 3 ll

ಪರಬೊಮ್ಮನೆನಿಪ ಬೆಣ್ಣೆಯ ಮುದ್ದಿಯನೆ ತೆಗೆದು
ಶರಣಮಣಿಯೆಂಬ ತುಪ್ಪವನೆ ಕಾಯಿಸಿ
ಮರಣವೆಂಬ ನೊರೆ ತೆಗೆದೊಗೆದು ಅಮೃತವ
ನಿರುತ ಹೃದಯವೆಂಬ ಕೊಡವನೆ ತುಂಬಿರೊ ll 4 ll

ಅನವರತ ಹರಿಸ್ಮರಣೆಯೆಂಬ ಬೀಸೂರಿಗೆ
ಅನುವಾಗಿ ಕುಳಿತುಂಡು ಸುಖದಿ ತೇಗಿ
ಚಿನುಮಯ ಚಿದಾನಂದ ಪುರಂದರವಿಠಲನ
ಅನುದಿನ ನೆನೆ ನೆನೆದು ಸುಖಿಯಾಗಿರಯ್ಯ ll 5 ll

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದರಲ್ಲಿ ಶ್ರೀಹರಿಯ ಪಾದಗಳನ್ನು ಕಾಮಧೇನುವಿಗೆ ಹೋಲಿಸಿ ಕಾಮಧೇನುವಿನಿಂದ ದೊರಕುವ ಫಲಗಳನ್ನು ಶ್ರೀಹರಿಯ ಚರಣ ಸೇವೆಯ ಫಲದಲ್ಲಿ ಸಮನ್ವಯಿಸಿ ಹೇಳಿದ್ದಾರೆ.

ಗುರುವಿನ ಉಪದೇಶವೆಂಬ ಹಗ್ಗದಿಂದ, ಹರಿಚರಣವೆಂಬ ಹಸುವನ್ನು ಕಟ್ಟಿ, ಮುಕ್ತಿನಾಮಾಮೃತವೆಂಬ ಹಾಲನ್ನು ಕರೆದು ಅದರಿಂದ ರುಚಿಯಾದ ಆನಂದವೆಂಬ ಭಕ್ಷ್ಯವನ್ನು ಮಾಡುವುದರ ರೂಪಕ ಈ ಪದದಲ್ಲಿದೆ.

**ಸುರಧೇನು** – ಬಯಸಿದ್ದನ್ನು ಕೊಡುವ ಕಾಮಧೇನು.

**ಕಣ್ಣಿ** – ಹಸುವಿನ ಕೊರಳಿಗೆ ಕಟ್ಟುವ ಹಗ್ಗ.

**ದಳಿ** = ಆಕಳನ್ನು ಹಿಂಡುವಾಗ ಕಾಲು ಮತ್ತು ಬೆನ್ನು ಕೂಡಿಸಿ ಕಟ್ಟುವ ಹಗ್ಗ.

**ವಿ. ಸೂ. : -** ಭಕ್ತಿ ಮತ್ತು ವಿರಕ್ತಿಗಳಿಂದ ಮುಕ್ತಿಯನ್ನು ದೊರೆಕಿಸಬಹುದೆಂಬ ಸೂಚನೆ ಇದೆ.

**ಚರಿಗೆ –** ಚೆಂಬು, ತಂಬಿಗೆ

**ಹಮ್ಮು** – ಹೆಮ್ಮೆ, ಗರ್ವ (ಪರ್ಬು).

**ಕುರುಳು** – ಬೆರಣಿ.

**ತಾಳಿಹಾಕು =** ಕುರುಳನ್ನು ವ್ಯವಸ್ಥಿತವಾಗಿ ಒಟ್ಟಿಡು.

**ನೀರ ಬೆರೆಸಿ =** ಹಿಂಡಿದ ಹಾಲನ್ನು ಕಾಯಿಸುವಾಗ ತೊಳೆ ನೀರನ್ನು ಹಾಕಿ ಕಾಯಿಸುವ ರೂಢಿ ಇದೆ.

**ವಿ. ಸೂ. : -** ಭಕ್ತನು ತನ್ನಲ್ಲಿರುವ ಅಹಂಕಾರಾದಿ ದುರ್ಗುಣಗಳನ್ನು ಇಂದ್ರಿಯ ಸಂಯಮದಿಂದ ನಾಶಮಾಡಬೇಕೆಂಬುದನ್ನು ರೂಪಕದಿಂದ ಸೂಚಿಸಿದ್ದಾರೆ.

**ಜ್ಞಾನಾಗ್ನಿ** = ಧ್ಯಾನವೆಂಬ ಬೆಂಕಿ

**ಇಂದ್ರಿಯನೇಮ –** ಇಂದ್ರಿಯ ನಿಗ್ರಹ.

**ಮಂಥ** = ಕಡಗೋಲು

ಇಲ್ಲಿ ಹಾಲನ್ನು ಹೆಪ್ಪುಹಾಕಿ ಕಡೆದು ಬೆಣ್ಣೆ ಮಾಡಿ ತುಪ್ಪವನ್ನು ಕಾಸಿ ಅಮೃತದಂತಹ ತುಪ್ಪವನ್ನು ಹೃದಯವೆಂಬ ಕೊಡದಲ್ಲಿ ತುಂಬುವ ವರೆಗಿನ ಮಾತುಗಳನ್ನು ಯುಕ್ತವಾದ ರೂಪಕಗಳಿಂದ ಬಣ್ಣಿಸಲಾಗಿದೆ.

**ಬೀಸೂರಿಗೆ –** ಹೂರಿಗೆ, ಬೀಸುಂ+ಪೂರಿಗೆ, ಒಂದು ಬಗೆಯ ಭಕ್ಷ್ಯ.

**ವಿ. ಸೂ. : -** ಹರಿಸ್ಮರಣೆ ಎಂಬ ಹೋಳಿಗೆಗೆ ಭಕ್ತಿ ಎಂಬ ತುಪ್ಪ ಹಚ್ಚಿ ಉಂಡು ಸುಖವಾಗಿ ಬಾಳಿರಿ.

**Classification:** Mundige
**Ankita:** purandara vittala
**Location:** NA
**Category:** Artha Bhaava, virakti, bhakti,
**Sub-Category:** Krishna, bhakti, amruta, mukti, smarane, sittu, jnana, niru, shanti, mana, Vishnu, maya, parabrahma, tuppa, benne, halu, marana, hrudaya, sukha,
**Pravachana:** NA
**Explanation:** Smt. Shwetha S.K., Bengaluru.